**ಸಾಕ್ಷಿಯನ್ನು ದಿಃ 03.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ತಂದೆ ಹೆಸರು ಸಣ್ಣೇಗೌಡ. ನನ್ನ ತಾತನ ಹೆಸರು ನರಸೇಗೌಡ. ನರಸೇಗೌಡರ ತಂದೆ ಹೆಸರು ಗೊತ್ತಿಲ್ಲ.

2. ವೈಕುಂಟೇಗೌಡರ ಮಗ ಸಣ್ಣೇಗೌಡ ಯಾರು ಎಂದರೆ, ಅದು ಟೈಪಿಂಗ್ ಮಿಸ್ಟೇಕ್ ಆಗಿದೆ ಎಂದು ನುಡಿಯುತ್ತಾರೆ.

3. ನರಸೇಗೌಡರ ಮಗ ಸಣ್ಣೇಗೌಡ ಹಾಗೂ ವೈಕುಂಟೇಗೌಡರ ಮಗ ಸಣ್ಣೇಗೌಡ ಬೇರೆ ಬೇರೆ ಎಂದರೆ, ಸರಿ.

4. ಎನ್. ಸಣ್ಣೇಗೌಡ ಎಂದರೆ ನನ್ನ ತಂದೆ.

5. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. 10 ನೇ ತರಗತಿ ಅಂಕಪಟ್ಟಿ ಮನೆಯಲ್ಲಿ ಇದೆ. ಅದರಲ್ಲಿ ನನ್ನ ತಂದೆ ಹೆಸರು ಸಣ್ಣೇಗೌಡ ಎಂದು ಮಾತ್ರ ಇದೆ.

6. 1 ನೇ ಪ್ರತಿವಾದಿಯ ಪತಿ ಹಾಗೂ 2 ನೇ ಪ್ರತಿವಾದಿಯ ತಂದೆ ಹೆಸರು ಎನ್. ಸಣ್ಣೇಗೌಡ ಎಂದರೆ, ಸರಿ.

7. ನಿಮ್ಮ ತಂದೆ ಸಣ್ಣೇಗೌಡ ಹಾಗೂ ಸದರಿ ಎನ್. ಸಣ್ಣೇಗೌಡ ಬೇರೆ ಬೇರೆ ಎಂದರೆ ಸರಿಯಲ್ಲ.

8. ಕೆಂಪಮ್ಮ ನನ್ನ ತಾಯಿ. 3 ರಿಂದ 7 ನೇ ಪ್ರತಿವಾದಿಗಳು ನನ್ನ ಸಹೋದರ ಸಹೋದರಿಯರು.

9. 2 ನೇ ಪ್ರತಿವಾದಿ ನನ್ನ ತಂದೆ ವಿರುದ್ಧ ಅ.ದಾ.ನಂ.129/1993 ರಂತೆ ವಿಭಾಗ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

10. ಸದರಿ ದಾವೆಯಲ್ಲಿ ನೀವು ಸಹ ಪಕ್ಷಗಾರರಾಗಿದ್ದೀರಾ ಎಂದರೆ, ಇರಬಹುದು.

11. ಸದರಿ ದಾವೆಯಲ್ಲಿ ನೀವು ಎನ್. ಸಣ್ಣೇಗೌಡ ರವರ ಮಕ್ಕಳಲ್ಲ ಎಂದು ತೀರ್ಪು ಕೊಟ್ಟಿದೆ ಎಂದರೆ, ನನಗೆ ಗೊತ್ತಿಲ್ಲ.

12. ಸದರಿ ಆದೇಶದ ವಿರುದ್ಧ ನೀವು ಮತ್ತು ಇತರರು ಆರ್.ಎ.ನಂ.68/2009 ರಂತೆ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ಸರಿ. ಸದರಿ ಅಪೀಲು ಸಹ ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

13. ಸದರಿ ಅಪೀಲು ಆದೇಶದ ವಿರುದ್ಧ ನೀವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಆರ್.ಎ.ಸಿ ನಂ.1913/2011 ರಂತೆ ಮೇಲ್ಮನವಿ ಸಲ್ಲಿಸಿ, ಅದು ಈಗ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ.

14. 1 ನೇ ಪ್ರತಿವಾದಿ ಹಾಗೂ 2 ನೇ ಪ್ರತಿವಾದಿ ನಿಮ್ಮ ವಿರುದ್ಧ ಪಿರಿಯಾಪಟ್ಟಣದ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅ.ದಾ.ನಂ.154/2022 ರಂತೆ ದಾವೆ ಹಾಕಿದ್ದಾರೆ ಎಂದರೆ ಸರಿ. ಅದು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ.

15. ಈ ದಾವೆಯದಲ್ಲಿ ಸದರಿ ಮೇಲೆ ಹೇಳಿದ ದಾವೆಯ ಬಗ್ಗೆ ಮಾಹಿತಿಯನ್ನು ನೀಡಲು ತೊಂದರೆ ಇತ್ತಾ ಎಂದರೆ, ಅದರ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಎಲ್ಲಾ ಮಾಹಿತಿ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆಯಾಗಲಿ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

16. ನೀವು ಎನ್. ಸಣ್ಣೇಗೌಡರ ರವರ ಮಕ್ಕಳಲ್ಲ ಎಂದರೆ ಸರಿಯಲ್ಲ.

17. ದಾವಾ ಸ್ವತ್ತುಗಳಲ್ಲಿ ಭಾಗಾಂಶ ಪಡೆಯಲು 1 ನೇ ಪ್ರತಿವಾದಿಯ ಪತಿ ಹಾಗೂ 2 ನೇ ಪ್ರತಿವಾದಿಯ ತಂದೆ, ನಿಮ್ಮ ತಂದೆ ಎಂದು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ಈ ದಾವೆಗೆ ಯಾವುದೇ ವ್ಯಾಜ್ಯ ಕಾರಣ ಇಲ್ಲದಿದ್ದರೂ, ಸುಳ್ಳು ವ್ಯಾಜ್ಯ ಕಾರಣ ಸೃಷ್ಠಿಸಿ ಸುಳ್ಳು ದಾವೆ ಹಾಕಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

19. ದಾವಾ ಸ್ವತ್ತುಗಳಲ್ಲಿ ನಿಮಗೆ ಯಾವುದೇ ಭಾಗಾಂಶದ ಹಕ್ಕು ಇಲ್ಲ ಹಾಗೂ ಪ್ರತಿವಾದಿಗಳಿಗೆ ನಿಮಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ